# ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ ಇವರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ಸೂಚನೆಗೆ ಉತ್ತರ.

## ವಿಷಯ

ತಾಲ್ಲೂಕು ಅಕ್ಷರ ದಾಸೋಹ ಅಧಿಕಾರಿ ಹುದ್ದೆಗೆ ಶಿಕ್ಷಣ ಇಲಾಖೆಯ ಬೋಧಕೇತರ ಪತ್ರಾಂಕಿತ ವ್ಯವಸ್ಥಾಪಕರ ಸಿಬ್ಬಂದಿಯನ್ನು ನೇಮಿಸಲು ಆಯುಕ್ತರುಗಳಿಗೆ ಸರ್ಕಾರ ಸೂಚಿಸಲಾಗಿರುತ್ತದೆ. ಪ್ರಸ್ತುತ ತಾಲ್ಲೂಕು ಅಕ್ಷರ ದಾಸೋಹ ಅಧಿಕಾರಿ ಹುದ್ದೆಯಲ್ಲಿ ಪ್ರೌಢಶಾಲಾ ಮುಖ್ಯ ಶಿಕ್ಷಕರು ಅತ್ಯಂತ ದಕ್ಷತೆಯಿಂದ ಅಕ್ಷರ ದಾಸೋಹ ಕಾರ್ಯಕ್ರಮವನ್ನು ಸಮರ್ಪಕವಾಗಿ ರಾಜ್ಯದ ಪ್ರತಿ ತಾಲ್ಲೂಕಿನ ಎಲ್ಲಾ ಶಾಲಾ ಮಕ್ಕಳಿಗೆ ಗುಣಮಟ್ಟದ ಆಹಾರವನ್ನು ಒದಗಿಸುವುದರ ಜೊತೆಗೆ ಕ್ಷೀರ ಭಾಗ್ಯ, ಮೊಟ್ಟೆ ವಿತರಣೆ ಕಾರ್ಯಕ್ರಮವನ್ನು ಯಶಸ್ವಿಗೊಳಿಸುತ್ತಾ ಬಂದಿದ್ದಾರೆ. ಇದರ ಜೊತೆಗೆ ಪ್ರತಿ ಶಾಲೆಗಳಿಗೆ ಭೇಟಿ ನೀಡಿ, ಅಡುಗೆ ಕೋಣೆ, ದಾಸ್ತಾನು ಕೊಠಡಿ ಪರಿಶೀಲನೆ, ಆಹಾರದ ಗುಣಮಟ್ಟದ ಪರಿಶೀಲನೆ ಮಾಡಿ, ಆ ಶಾಲೆಯ ದಾಖಲಾತಿ, ಹಾಜರಾತಿ ಮತ್ತು ಮಕ್ಕಳ ಶೈಕ್ಷಣಿಕ ಪ್ರಗತಿಯ ಬಗ್ಗೆ ಶಾಲಾ ಶಿಕ್ಷಕರೊಂದಿಗೆ ಚರ್ಚಿಸಿ, ಗುಣಾತ್ಮಕ ಶಿಕ್ಷಣವನ್ನು ನೀಡಲು ಶಿಕ್ಷಕರಿಗೆ ಮಾರ್ಗದರ್ಶನ, ಸಲಹೆ ಸೂಚನೆಗಳನ್ನು ನೀಡುತ್ತಾ, ಮಕ್ಕಳ ದಾಖಲಾತಿಯನ್ನು ಹೆಚ್ಚಿಸುತ್ತಾ ಬಂದಿದ್ದು, ಆಗಿಂದ್ದಾಗ್ಗೆ ಮೇಲಾಧಿಕಾರಿಗಳಿಗೆ ವರದಿಯನ್ನು ಒಪ್ಪಿಸುವ ಗುರುತರ ಜವಾಬ್ದಾರಿಯನ್ನು ನಿರ್ವಹಿಸುತ್ತಾ ಬಂದಿರುತ್ತಾರೆ. ಅಲ್ಲದೆ ತಾಲ್ಲೂಕುಗಳಲ್ಲಿ ಶಾಲೆಗಳನ್ನು ದತ್ತು ತೆಗೆದುಕೊಳ್ಳುವುದು. ಎಸ್.ಎಸ್.ಎಲ್.ಸಿ. ಪರೀಕ್ಷಾ ಫಲಿತಾಂಶ ಸುಧಾರಣೆ ಕ್ರಮಗಳಲ್ಲಿ ಭಾಗಿಯಾಗಿ ಕಾರ್ಯ ನಿರ್ವಹಿಸುತ್ತಿರುತ್ತಾರೆ. ಮುಖ್ಯ ಶಿಕ್ಷಕರು ಶೈಕ್ಷಣಿಕ ಆಡಳಿತ ಸಂಬಂಧ ಅನೇಕ ತರಬೇತಿಗಳನ್ನು ಪಡೆದು ಉತ್ತಮ ಅನುಭವ ಹೊಂದಿರುವ ಇವರನ್ನು ತಾಲ್ಲೂಕು ಅಕ್ಷರ ದಾಸೋಹ ಅಧಿಕಾರಿ ಹುದ್ದೆಯಲ್ಲಿ ಮುಂದುವರೆಸುವುದು ಅತ್ಯಾವಶ್ಯಕವಾಗಿದೆ.

ಪತ್ರಾಂಕಿತ ಹುದ್ದೆಗಳು ಶಿಕ್ಷಣ ಇಲಾಖೆಯಲ್ಲಿ ತುಂಬಾ ಕಡಿಮೆ ಇರುವುದರಿಂದ ತಾಲ್ಲೂಕು ಅಕ್ಷರ ದಾಸೋಹ ಜವಾಬ್ದಾರಿಯನ್ನು ಇವರಿಗೆ ಒಪ್ಪಿಸುವುದರಿಂದ ಉತ್ತಮ ನಿರ್ವಹಣೆ ಕಷ್ಟಸಾಧ್ಯ ಮತ್ತು ಕಚೇರಿ ಕೆಲಸಗಳಿಗೆ ತುಂಬಾ ಅಡ್ಡಿ ಉಂಟಾಗುತ್ತದೆ. ಈ ಎಲ್ಲಾ ಕಾರಣಗಳಿಂದ ಮುಖ್ಯ ಶಿಕ್ಷಕರನ್ನೇ ತಾಲ್ಲೂಕು ಅಕ್ಷರ ದಾಸೋಹ ಅಧಿಕಾರಿ ಹುದ್ದೆಯಲ್ಲಿ ಮುಂದುವರೆಸುವಂತೆ ಸಂಬಂಧಪಟ್ಟವರಿಗೆ ಸೂಕ್ತ ನಿರ್ದೇಶನ ನೀಡಬೇಕೆಂದು ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರನ್ನು ಕೋರುತ್ತೇನೆ.

## ಉತ್ತರ

ಶಾಲಾ ಶಿಕ್ಷಣ ಇಲಾಖೆಯ ಮಹತ್ವಪೂರ್ಣ ಯೋಜನೆಯಾದ ಮಧ್ಯಾಹ್ನ ಉಪಹಾರ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುವಲ್ಲಿ ಪ್ರತಿ ತಾಲ್ಲೂಕುಗಳಲ್ಲಿ ಗ್ರೂಪ್ ಬಿ ವೃಂದದ ತಾಲ್ಲೂಕು ಅಕ್ಷರ ದಾಸೋಹ ಅಧಿಕಾರಿಯು ತಾಲ್ಲೂಕು ಮಟ್ಟದ ಮೇಲ್ವಿಚಾರಣೆಯನ್ನು ನಡೆಸಬೇಕಾಗಿರುತ್ತದೆ. ಸದರಿ ಹುದ್ದೆಗೆ ಈ ಕೆಳಕಂಡ ಕರ್ತವ್ಯಗಳನ್ನು / ಜವಾಬ್ದಾರಿಗಳನ್ನು ನಿಗದಿಪಡಿಸಲಾಗಿದೆ.

- ಆಹಾರ ಪದಾರ್ಥಗಳ ಬೇಡಿಕೆ, ಅಗತ್ಯತೆಗಳನ್ನು ಸಂಗ್ರಹಿಸಿ. ಅಂಕಿ ಅಂಶಗಳನ್ನು ಸಂಗ್ರಹಣೆ, ಕ್ರೋಢೀಕರಣ, ನೈಜತೆ ಪರಿಶೀಲನೆ ಮತ್ತು ಸಂಸ್ಕರಣೆಯೊಂದಿಗೆ ಜಿಲ್ಲಾ ಹಂತಕ್ಕೆ ಸಲ್ಲಿಸುವುದು.
- ಪೂರೈಕೆಯಾದ ಆಹಾರ ಪದಾರ್ಥಗಳನ್ನು ಆಹಾರ ಪರೀಕ್ಷಕರು ಮತ್ತು ತಜ್ಞರಿಂದ ವರದಿ ಸಂಗ್ರಹಿಸಿ ಶಾಲೆಗಳಿಗೆ ಪೂರೈಸುವುದು.

- ಇಲಾಖೆಯ ವಿವಿಧ ಸ್ತರಗಳ ಅಧಿಕಾರಿಗಳೊಂದಿಗೆ ಸಿಬ್ಬಂದಿಯೊಂದಿಗೆ ವ್ಯವಹರಿಸುವುದು, ಸಹಕರಿಸುವುದು.
- ಮಕ್ಕಳ ಶೈಕ್ಷಣಿಕ ಮನೋವೈಜ್ಞಾನಿಕ ಬೆಳವಣಿಗೆ, ಭೌತಿಕ ಬೆಳವಣಿಗೆ, ಪೌಷ್ಠಿಕಾಂಶದ ಸಾಮಾನ್ಯ ಜ್ಞಾನ / ತಿಳುವಳಿಕೆ.
- ಆಹಾರದ ಪ್ರಮಾಣ ನಿರ್ಧಾರ, ಆಹಾರದ ಗುಣಮಟ್ಟ, ಪೌಷ್ಠಿಕಾಂಶ, ಕ್ಯಾಲೋರೀಸ್, ಆಹಾರ ಪದಾರ್ಥಗಳ ಶೆಲ್ಫ್ ಲೈಫ್‌ಗಳನ್ನು ವಿಶ್ಲೇಷಿಸಿ ಸೂಕ್ತ ತೀರ್ಮಾನಗಳನ್ನು ತೆಗೆದುಕೊಳ್ಳುವಿಕೆ, ನ್ಯೂಟ್ರಿಯೆಂಟ್ಸ್, ಮಲ್ಟಿ ನ್ಯೂಟ್ರಿಯೆಂಟ್ಸ್‌ಗಳ ತಿಳುವಳಿಕೆ ಅಗತ್ಯವಿರುತ್ತದೆ.
- ಮಕ್ಕಳ ದೈಹಿಕ ಬೌದ್ಧಿಕ(Cognitive), ಮಾನಸಿಕ ಬೆಳವಣಿಗೆ ಮತ್ತು ಅದಕ್ಕೆ ಅಗತ್ಯವಿರುವ ಅಥವಾ ಪರಿಣಾಮ ಬೀರುವ ಅಂಶಗಳ ತಿಳುವಳಿಕೆ.
- ಅಡುಗೆ ಕೋಣೆ, ಸಂಗ್ರಹಣಾ ಕೊಠಡಿಗಳ ಅಗತ್ಯತೆ, ಅಡುಗೆ ಕೋಣೆಯ ಸುರಕ್ಷತಾ ಕ್ರಮಗಳು ಮತ್ತು ಅದಕ್ಕೆ ಅಗತ್ಯವಿರುವ ಪರಿಕರಗಳು ಮತ್ತು ನಿರ್ವಹಣೆ.
- ಶಾಲಾ ಭೇಟಿ ಮಾಡುವುದು ಮತ್ತು ಈ ಸಂದರ್ಭದಲ್ಲಿ ಶೈಕ್ಷಣಿಕ ಪಠ್ಯ, ಸಹಪಠ್ಯ, ಪಠ್ಯೇತರ ಚಟುವಟಿಕೆಗಳ ಪರಿಶೀಲನೆ ಮತ್ತು ಮಾರ್ಗದರ್ಶನ ನೀಡುವುದು. ಅಕ್ಷರ ದಾಸೋಹ ಕಾರ್ಯಕ್ರಮ ಅನುಷ್ಠಾನ, ಮೂಲಭೂತ ಸೌಲಭ್ಯಗಳ ಲಭ್ಯತೆ, ಮತ್ತಿತರ ಅಂಶಗಳನ್ನು ಒಬ್ಬ ಶಿಕ್ಷಣಾಧಿಕಾರಿಗಳು ಪರಿಶೀಲಿಸಬೇಕಿರುವ ಎಲ್ಲಾ ಅಂಶಗಳನ್ನು ಪರಿಶೀಲಿಸಬೇಕೆಂಬುದು ಇಲಾಖೆಯ ಆಶಯ ಮತ್ತು ಅಗತ್ಯತೆಯಾಗಿರುತ್ತದೆ.

ಮೇಲಿನಂತೆ ನಿಗಧಿಪಡಿಸಲಾದ ಕರ್ತವ್ಯಗಳಲ್ಲಿ ಶೈಕ್ಷಣಿಕ ಚಟುವಟಿಕೆಗಳ ಜವಾಬ್ದಾರಿಗಳು ಒಳಗೊಂಡಿರುವುದರಿಂದ ಈ ಹುದ್ದೆಯನ್ನು ಬೋಧಕ ವೃಂದದ ಗ್ರೂಪ್ ಬಿ ಅಧಿಕಾರಿಗಳಿಂದ ಭರ್ತಿ ಮಾಡಲಾಗುತ್ತಿದೆ. ಶಿಕ್ಷಕರ ವರ್ಗಾವಣೆ ಕಾಯ್ದೆ, 2020ರ ಕಲಂ 2(ಹೆಚ್)ರನ್ವಯ ಸದರಿ ಹುದ್ದೆಗಳನ್ನು ಅರ್ಹತಾ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವ ಪ್ರೌಢ ಶಾಲಾ ಮುಖ್ಯ ಶಿಕ್ಷಕರ ವೃಂದದಿಂದ ಕೌನ್ಸಲಿಂಗ್ ಮೂಲಕ ಭರ್ತಿ ಮಾಡಲಾಗುತ್ತಿದೆ. ಹೀಗೆ ನೇಮಕಗೊಂಡ ಅಧಿಕಾರಿಗಳಿಗೆ ಸೂಕ್ತ ತರಬೇತಿಯನ್ನು ಸಹ ನೀಡಲಾಗುತ್ತದೆ.

ಬೋಧಕೇತರ ಅಧಿಕಾರಿಗಳು ಆಡಳಿತಾತ್ಮಕ ಕಾರ್ಯ ಮತ್ತು ತಪಾಸಣೆ ನಡೆಸುವ ಅನುಭವ ಮಾತ್ರ ಹೊಂದಿರುತ್ತಾರೆ. ತಾಲ್ಲೂಕು ಅಕ್ಷರ ದಾಸೋಹ ಅಧಿಕಾರಿ ಹುದ್ದೆಯು ಆಡಳಿತಾತ್ಮಕ ಮತ್ತು ಶೈಕ್ಷಣಿಕ ಕಾರ್ಯಭಾರವನ್ನು ಒಳಗೊಂಡಿರುತ್ತದೆ. ಸದರಿ ಹುದ್ದೆಯನ್ನು ನಿರ್ವಹಿಸುವಲ್ಲಿ ಬೋಧಕೇತರ ಅಧಿಕಾರಿಗಳಿಗೆ ಶೈಕ್ಷಣಿಕ ಕಾರ್ಯಗಳ ಹಿನ್ನೆಲೆ ಇಲ್ಲದಿರುವುದರಿಂದ ಬೋಧಕೇತರ ಅಧಿಕಾರಿಗಳನ್ನು ಈ ಹುದ್ದೆಗೆ ನೇಮಿಸುವುದು ಸೂಕ್ತವಲ್ಲವೆಂದು ಪರಿಗಣಿಸಿ, ಗ್ರೂಪ್ ಬಿ ವೃಂದದ ಪ್ರೌಢ ಶಾಲಾ ಮುಖ್ಯ ಶಿಕ್ಷಕರನ್ನು ನೇಮಿಸಿಕೊಳ್ಳಲಾಗುತ್ತಿದೆ.

ಸಂಖ್ಯೆ: ಇಪಿ 89 ಡಿಎಆರ್ 2023

(ಮಧು ಬಂಗಾರಪ್ಪ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ
ಇಲಾಖಾ ಸಚಿವರು.